**ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ**

**ಸಾಕ್ಷಿಗೆ ಇಂದು ದಿನಾಂಕ : 30.01.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು : ವಾದಿಯವರ ಪರವಾಗಿ ಶ್ರೀ. ಬಿ.ಎಸ್.ಡಿ. ವಕೀಲರಿಂದ**

ನಾನು 7 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುವೇನು. ವಾದಿಯ ತಂದೆಯ ಪರಿಚಯ ನನಗೆ ಇರುವದು. ನನಗೆ ಈಗ 58 ವರ್ಷ ವಯಸ್ಸು. ವಾದಿಯ ತಂದೆ ಮಹಾಲಿಗಪ್ಪ ಈಗ ಮೃತಪಟ್ಟು 15 ವರ್ಷಗಳಾಗಿರುವವು. ದಾವಾ ಜಮೀನುಗಳ ಸರ್ವೇ ನಂ.153 ಮತ್ತು 154. ಈ ಜಮೀನುಗಳ ಹತ್ತಿರದಲ್ಲೇ ನನ್ನ ಮಾಲೀಕತ್ವದ ಸರ್ವೇ ನಂ. 147 ಜಮೀನು ಇರುವದು. ದಾವಾ ಜಮೀನುಗಳು ಮೂಲತಃ ಸರ್ಕಾರದ ಜಮೀನುಗಳು ಎಂದರೆ ಸರಿ. ವಾದಿಯ ತಂದೆ ಮಹಾಲಿಂಗಪಪನಿಗೆ ಹಿರಿಯರಿಂದ ಬಂದಿದ್ದಂತಹ ಯಾವುದೇ ಆಸ್ತಿಗಳು ಇರಲಿಲ್ಲ. ಮಹಾಲಿಂಗಪ್ಪನಿಗೆ ಇಬ್ಬರು ಹೆಣ್ಣು ಮಕ್ಕಳು ಮತ್ತು ಇಬ್ಬರು ಗಂಡು ಮಕ್ಕಳು ಇರುವರು. ಅವರೆಂದರರೆ ವಾದಿ ಮತ್ತು ಪ್ರತಿವಾದಿ 1 ಮತ್ತು ಬಸವ್ವ ಮತ್ತು ಮಹಾದೇವಿ ಎಂಬುವವರು. ಈ ಹೆಣ್ಣುಮಕ್ಕಳ ವಿವಾಹವಾಗಿ ಈಗ ಸುಮಾರು 18 ವರ್ಷಗಳಾಗಿರಬಹುದು. ಇವರ ವಿವಾಹ ಇವರ ತಂದೆ ತಾಯಿ ಮಾಡಿರುವರು. ಮಹಾದೇವಿ ಪ್ರತಿವಾದಿ 1 ರವರ ಜೊತೆಯಲ್ಲೇ ವಾಸವಾಗಿರುವಳು. ಮಹಾದೇವಿಯ ಗಂಡ ತನ್ನ ಊರಿನಲ್ಲೇ ವಾಸವಾಗಿರುವನು.

ದಾವಾ ಜಮೀನುಗಳು ಮಹಾಲಿಂಗಪ್ಪನ ಜೀವಿತ ಅವಧಿಯಲ್ಲಿ ಈತನ ಮನೆತನಕ್ಕೆ ಮಂಜೂರು ಆಗಿರುವಂತಹ ಜಮೀನುಗಳು ಎಂದರೆ ಸರಿಯಲ್ಲ. ಈ ದಾವಾ ಜಮೀನುಗಳು ಯಾವ ವರ್ಷದಲ್ಲಿ ಪ್ರತಿವಾದಿ 1 ರವರಿಗೆ ಮಂಜೂರು ಆಗಿರುವವು ಎಂದು ನನಗೆ ನೆನಪು ಇರುವುದಿಲ್ಲ. ವಾದಿಯ ತಂದೆ ಮಹಾನಿಂಗಪ್ಪ ದಿನಾಂಕಃ 22.07.2007 ರಂದು ಮೃತಪಟ್ಟಿರುವರು ಎಂದರೆ ಸರಿ. ಈ ದಾವಾ ಜಮೀನುಗಳು ದಿನಾಂಕಃ 13.11.1997 ರಲ್ಲಿ ಮಂಜೂರು ಆಗಿರುವವು ಎಂದರೆ ಸರಿ. ಮಹಾಲಿಂಗಪ್ಪನ ಒಪ್ಪಿಗೆಯ ಮೇರೆಗೆ ಆತನ ಹಿರಿಯ ಮಗನಾದ ಪ್ರತಿವಾದಿ 1 ರವರ ಹೆಸರಿನಲ್ಲಿ ಈ ದಾವಾ ಜಮೀನುಗಳು ಮಂಜೂರಾಗಿರುವವು ಎಂದರೆ ಸರಿಯಲ್ಲ. ಈ ಜಮೀನು ಮಂಜೂರಾದ ನಂತರ ವಾದಿ ಪ್ರತಿವಾದಿ1 ಮತ್ತು ಇವರ ತಂದೆ ಕೂಡಿಕೊಂಡು ದಾವಾ ಜಮೀನಿನಲ್ಲಿ ದಾವಾ ಜಮೀನನ್ನು ಅಬಿವೃದ್ಧಿಪಡಿಸಿ ಬಾವಿಯನ್ನು ತೆಗೆದಿರುವರು ಎಂದರೆ ಸಾಕ್ಷಿ ನುಡಿಯುವುದೇನೆಂದರೆ ಪ್ರತಿವಾದಿ 1 ತಾನು ಮಾಡಿರುವುದಾಗಿ ಎಂದು ಹೇಳುತ್ತಾನೆ. ನನಗೆ ಇದರ ಬಗ್ಗೆ ಸ್ವಂತಕ್ಕೆ ಮಾಹಿತಿ

ಇರುವುದಿಲ್ಲ. ಪ್ರತಿವಾದಿ 2 ರವರ ಹೆಸರಿನಲ್ಲಿ ಇರುವಂತಹ ಮನೆಯ ಆಸ್ತಿಗಳು ಸರ್ಕಾರದವರು ಅವರ ತಾಯಿಯ ಹೆಸರಿನಲ್ಲಿ ಮಂಜೂರು ಮಾಡಿರುವರು. ಈ ಮನೆಯ ಆಸ್ತಿಗಳು ಸರ್ಕಾರದಿಂದ ಮಂಜೂರಾಗುವ ಸಮಯದಲ್ಲಿ ಪ್ರತಿವಾದಿ 2 ರವರಿಗೆ ಸ್ವತಂತ್ರವಾಗಿ ವಾಸಿಸಲು ಮನೆ ಇರಲಿಲ್ಲ ಎಂದರೆ ಸರಿಯಲ್ಲ.

ಸರ್ಕಾರದಿಂದ ಪ್ರತಿವಾದಿ 2 ರವರಿಗೆ ಮನೆ ಮಂಜೂರಾಗಿರುವ ದಾವಾ ಮನೆಯ ಆಸ್ತಿಗಳಿಗಿಂತ ಪೂರ್ವದಲ್ಲಿ ಪ್ರತಿವಾದಿ 2 ರವರ ಮಾಲೀಕತ್ವದ ಮನೆಯು ನಂಬರು ನನಗೆಹೇಳಲು ಆಗುವುದಿಲ್ಲ. ಪ್ರತಿವಾದಿ 2 ರವರಿಗೆ ವಾಸಿಸಲು ಯಾವುದೇ ಮನೆ ಮತ್ತು ಜಾಗೆ ಇರದೇ ಇರುವುದರಿಂದ ಇವರಿಗೆ ವಾಸಿಸಲು ಸರ್ಕಾರದವರು ಈ ದಾವಾ ಮನೆಗಳನ್ನು ಪ್ರತಿವಾದಿ 2 ರವರಿಗೆ ಮಂಜೂರು ಮಾಡಿರುವರು ಎಂದರೆ ಸರಿ. ಈ ಮನೆಗಳನ್ನು ಮಂಜೂರು ಮಾಡುವ ಸಮಯದಲ್ಲಿ ಪ್ರತಿವಾದಿ 1 ರವರ ಹೆಂಡತಿ ಜೀವಂತವಾಗಿರುವರು, ಈಗಲೂ ಸಹ ಅವರು ಜೀವಂತವಾಗಿರುವರು. ಸರ್ಕಾರದವರು ಮಂಜೂರು ಮಾಡುವ ಸಮಯದಲ್ಲಿ ಪ್ರತಿವಾದಿ 1 ರವರು ತನ್ನ ಹೆಂಡತಿಯ ಹೆಸರಿನಲ್ಲಿ ಮನೆ ಮಂಜೂರು ಮಾಡಿಕೊಂಡಿರುವುದಿಲ್ಲ. ಪ್ರತಿವಾದಿ 2 ರವರು ಮನೆಯ ಯಜಮಾನಿಯಾಗಿರುವುದರಿಂದ ಅವಳ ಹೆಸರಿನಲ್ಲಿ ಮಂಜೂರು ಮಾಡಿರುವರು ಎಂದರೆ ಸರಿ.

ಈ ಕಾರಣಕ್ಕಾಗಿ ಸರ್ಕಾರದವರು ಮಹಾನಿಂಗಪ್ಪನ ಹೆಸರಿನಲ್ಲಿ ಜಮೀನುಗಳನ್ನು ಮಂಜೂರು ಮಾಡುವುದಾಗಿ ಹೇಳಿದ್ದರೂ ಸಹಿತ ಆಗ ತನ್ನ ಹಿರಿಯ ಮಗ ಪ್ರತಿವಾದಿ 1 ರವರು ಇರುವುದರಿಂದ ಆತನ ಹೆಸನರಿಲ್ಲಿ ಮಂಜೂರು ಮಾಡಿ ಅಂತ ಹೇಳಿದ್ದು ಆ ಕಾರಣಕ್ಕಾಗಿ ಪ್ರತಿವಾದಿ 1 ರವರ ಹೆಸರಿನಲ್ಲಿ ಮಂಜೂರು ಮಾಡಿರುವರು ಎಂದರೆ ಸರಿಯಲ್ಲ. ವಾದಿ ಪ್ರತಿವಾದಿ 1 ರವರ ಸಹೋದರನಾಗಿದ್ದರಿಂದ ಈ ಮಂಜೂರಾದ ಜಮೀನುಗಳಲ್ಲಿ ಪ್ರತಿವಾದಿ 1 ರವರು ವಾದಿಗೆ ಪಾಲು ನೀಡುವನು ಎಂಬ ಕಾರಣಕ್ಕಾಗಿ ಪ್ರತಿವಾದಿ 1 ರವರ ಹೆಸರಿನಲ್ಲಿ ಈಜಮೀನುಗಳನ್ನು ಸರ್ಕಾರದವರು ಮಂಜೂರು ಮಾಡಿರುವರು ಎಂದರೆ ಸರಿಯಲ್ಲ. ಮಹಾನಿಂಗಪ್ಪ ಮೃತಪಟ್ಟ ನಂತರ ದಾವಾ ಜಮೀನಿನಲ್ಲಿ ವಾದಿ ಮತ್ತು ಪ್ರತಿವಾದಿ 1 ರವರಿಗೆ ಸಮಪಾಲು ಇರುವದು ಎಂದರೆ ಸರಿಯಲ್ಲ.

ಮಹಾನಿಂಗಪ್ಪ ಮೃತಪಟ್ಟ ನಂತರ ದಾವಾ ಜಮೀನುಗಳನ್ನು ವಾದಿ ಮತ್ತು ಪ್ರತಿವಾದಿ 1 ಮತ್ತು 2 ರವರು ಜಂಟಿಯಾಗಿ ಸಾಗುವಳಿ ಮಾಡುತ್ತಾ ಇರುವರು ಎಂದರೆ ಸರಿಯಲ್ಲ.

ಮಹಾನಿಂಗಪ್ಪ ಮೃತಪಟ್ಟ ನಂತರ ದಾವಾ ಆಸ್ತಿಗಳು ವಾದಿ, ಪ್ರತಿವಾದಿಯುರು ಜಂಟಿಯಾಗಿ ಮಾಲೀಕರಾಗಿರುವುದರಿಂದ ದಾವಾ ಆಸ್ತಿಗಳಲ್ಲಿ ವಾದಿಗೂ ಸಹ ಪಾಲು ಇರುವದು ಎಂದರ ಸಾಕ್ಷಿ ನುಡಿಯುವುದೇನೆಂದರೆ ಪ್ರತಿವಾದಿ 1 ರವರು ಬಯಸಿದರೆ ಆತನ ಸಹೋದರನಿಗೆ ಪಾಲು ನೀಡಬಹುದು ಎಂದು ಉತ್ತರಿಸಿರುವರು. ಮಹಾನಿಂಗಪ್ಪನ ಜೀವಿತಾವಧಿಯಲ್ಲಾಗಲೀ ಮತ್ತು ಆತ ಮೃತಪಟ್ಟನಂತರ ಈ ದಾವೆ ದಾಖಲು ಮಾಡುವವರೆಗೂ ವಾದಿ ಮತ್ತು ಪ್ರತಿವಾದಿಯರ ಮಧ್ಯೆ ಕುಟುಂಬದ ಆಸ್ತಿಯಲ್ಲಿ ಪಾಲು ಆಗಿರುವುದಿಲ್ಲ. ಮಹಾನಿಂಗಪ್ಪನ ಕುಟುಂಬದ ಆಹಾರ ಪಡಿತರ ಚೀಟಿಯನ್ನು ನಾನು ನೋಡಿರುವುದಿಲ್ಲ.

ಸುಮಾರು 20 ವರ್ಷಗಳ ಹಿಂದೆ ಮಹಾಲಿಂಗಪ್ಪನ ಜೀವಿತಾವಧಿಯಲ್ಲಿ, ವಾದಿ ಪ್ರತಿವಾದಿಯರು ಕೂಡಿಯೇ ವಾಸವಾಗಿದ್ದರು. ಮಹಾನಿಂಗಪ್ಪನ ಜೀವಿತಾವಧಿಯಲ್ಲಿ ವಾದಿ ಮತ್ತು ಪ್ರತಿವಾದಿಯರಿಗೆ ಸಂಬಂಧಪಟ್ಟಂತೆ ಒಂದೇ ಕುಟುಂಬದ ಆಹಾರ ಪಡಿತರ ಚೀಟಿ ಹೊಂದಿದ್ದರು ಎಂದರೆ ಸಾಕ್ಷಿ ತನಗೆ ಮಾಹಿತಿ ಇರುವುದಿಲ್ಲವೆಂದು ಉತ್ತರಿಸಿರುವರು. ಚುಣಾವಣಾ ಮತದಾರರ ಪಟ್ಟಿಯ ಯಾಧಿಯಲ್ಲಿ ವಾದಿ ಮತ್ತು ಪ್ರತಿವಾದಿಯರು ಮತ್ತು ಮಹಾಲಿಂಗಪ್ಪನ ಹೆಸರುಗಳು ಒಂದೇ ಮನೆಯ ವಿಳಾಸದ ಕ್ರಮಸಂಖ್ಯೆಗಳನ್ನು ಹೊಂದಿದ್ದವು ಎಂದರೆ ಸಾಕ್ಷಿ ತನಗೆ ಮಾಹಿತಿ ಇರುವುದಿಲ್ಲವೆಂದು ಉತ್ತರಿಸಿರುವರು. ದಾವಾ ಜಮೀನುಗಳನ್ನು ಪ್ರತಿವಾದಿ 1 ರವರಿಗೆ ಸರ್ಕಾರದವರು ಮಂಜೂರು ಮಾಡುವ ಸಮಯದಲ್ಲಿ ನಾನು ಹಾಜರಿರಲಿಲ್ಲ. ಅದೇ ರೀತಿ ಮಹಾಲಿಂಗಪ್ಪ ದಾವಾ ಜಮೀನುಗಳನ್ನು ಪ್ರತಿವಾದಿ 1 ರವರ ಹೆಸರಿನಲ್ಲಿ ಮಂಜೂರು ಮಾಡುವಂತೆ ಹೇಳುವ ಸಮಯದಲ್ಲಿಯೂ ಸಹ ನಾನು ಹಾಜರಿರಲಿಲ್ಲ. ನಾನು ವಾದಿಗೆ ಅನ್ಯಾಯ ಮಾಡುವ ಸಲುವಾಗಿ ಪ್ರತಿವಾದಿ 1 ರವರ ಮಾತುಕೇಳಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ** ಇರುವುದಿಲ್ಲ.
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

Sd/-

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ